**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,ರೋಣ**

ಸಿ ಸಿ ನಂಬರ :658/2021

CW-10 PW-5

| | |
|---|---|
| ಹೆಸರು | : ಗುರುಶಾಂತ ದಾಶ್ಯಾಳ |
| ತಂದೆಯ ಹೆಸರು | : ಸಾಹೇಬಗೌಡ |
| ವಯಸ್ಸು | : 43 ವರ್ಷ |
| ಉದ್ಯೋಗ | : ಪೊಲೀಸ್ ನಿರೀಕ್ಷಕರು, ಬಸವನ ಬಾಗೇವಾಡಿ ಪೊಲೀಸ್ ಠಾಣೆ ಜಿಃ ವಿಜಯಪುರ |
| ವಾಸಸ್ಥಳ | : ಬಸವನ ಬಾಗೇವಾಡಿ, ಜಿಃ ವಿಜಯಪುರ |

---

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 13−05−2026 ರಂದು ಪ್ರಮಾಣೀಕರಿಸಲಾಯಿತು.

(ವಿಡಿಯೋ ಕಾನ್ಫರೆನ್ಸ ಮುಖಾಂತರ)

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ದಿಃ 14.10.2019 ರಿಂದ 23.09.2021 ರ ವರೆಗೆ ನಾನು ಗಜೇಂದ್ರಗಡ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಎಂದು ಗಜೇಂದ್ರಗಡ ದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 08.05.2020 ರಂದು ನಾನು ಚಾಸಾ.9 ರವರಿಂದ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಪಡೆದು ಪರಿಶೀಲಿಸಿದ್ದೇನೆ. ದಿಃ 12.05.2020 ರಂದು ಚಾಸಾ.6 ರವರ ಮುಖಾಂತರ ಮುಖಾಂತರ ಭಾ. ದಂ.ಪ್ರ ಸಂಹಿತೆ ಕಲಂ. 41 ಎ ರಡಿಯಲ್ಲಿ ಆರೋಪಿತನಿಗೆ ವಿಚಾರಣೆಗೆ ಹಾಜರಾಗಲು ನೋಟೀಸು ಜಾರಿ ಮಾಡಿರುತ್ತೇನೆ. ಆದರೆ ಆರೋಪಿತನು ವಿಚಾರಣೆಗೆ ಹಾಜರಾಗಿರುವುದಿಲ್ಲ. ನಂತರ ಪುನಃ ಚಾಸಾ.6 ರವರ ಮುಖಾಂತರ ದಿಃ 26.08.2020 ರಂದು ಭಾ. ದಂ.ಪ್ರ ಸಂಹಿತೆ ಕಲಂ. 41 ಎ ರಡಿಯಲ್ಲಿ ಆರೋಪಿತನಿಗೆ ವಿಚಾರಣೆಗೆ ಹಾಜರಾಗಲು ನೋಟೀಸು ಜಾರಿ ಮಾಡಿರುತ್ತೇನೆ. ದಿಃ 27.08.2020 ರಂದು ಚಾಸಾ.6 ರವರು ನೋಟೀಸು ಜಾರಿ ಮಾಡಿದ ಕುರಿತು ವರದಿ ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿಃ 31.08.2020 ರಂದು ಚಾಸಾ.7 ರವರ ಮುಖಾಂತರ ಭಾ. ದಂ.ಪ್ರ ಸಂಹಿತೆ ಕಲಂ. 41 ಎ ರಡಿಯಲ್ಲಿ ಆರೋಪಿತನಿಗೆ ವಿಚಾರಣೆಗೆ ಹಾಜರಾಗಲು ನೋಟೀಸು ಜಾರಿ ಮಾಡಿರುತ್ತೇನೆ. ಅದೇ ದಿನ ಚಾಸಾ.7 ರವರು ನೋಟೀಸು ಜಾರಿ ಮಾಡಿದ ಕುರಿತು ವರದಿ ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಮೂರು ಬಾರಿ ನೋಟೀಸು ನೀಡಿದರು ಆರೊಪಿತನು ವಿಚಾರಣೆಗೆ ಹಾಜರಾಗಿರುವುದಿಲ್ಲ. ದಿಃ 02.11.2020 ರಂದು ಚಾಸಾ.4 ಮತ್ತು 5 ರವರ ಹೇಳಿಕೆ ಪಡೆದಿದ್ದೇನೆ. ದಿಃ 17.03.2021 ರಂದು ಆರೋಪಿತನ ವಿರುದ್ಧ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ.

ಸಾಕ್ಷಿಯು ನೋಟೀಸಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.5 ರಿಂದ 7 ಎಂದು ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.5 ಎ, 6 ಎ, 7 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿಯ ಪರ ವಕೀಲರಿಂದಃ ಶ್ರೀ. ಆರ್.ಐ.ಬಿ.**

ಆರೋಪಿತನು ಚಸಾ.1 ರವರಿಗೆ ಮೊಬೈಲ ನಲ್ಲಿ ಅವಾಚ್ಯ ಶಬ್ದಗಳಿಂದ ಬೈದ ಕುರಿತು ಕಾಲ್ ರೆಕಾರ್ಡ್ಸ್ ಮತ್ತು ಮೆಸೇಜ್ ಗಳ ಪ್ರತಿಗಳನ್ನು ಹಾಜರು ಮಾಡಿಲ್ಲ, ನಾನು ಯಾವುದೇ ತನಿಖೆ ಕೈಗೊಂಡಿಲ್ಲ, ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ, ಸುಳ್ಳು ನೋಟೀಸು ನೀಡಿ ಆರೋಪಿತನು ಯಾವುದೇ ತಪ್ಪು ಮಾಡದಿದ್ದರು ದೂರುದಾರರು ನೀಡಿದ ಖೊಟ್ಟಿ ದೂರಿಗೆ ಅನುಗುಣವಾಗಿ ಖೊಟ್ಟಿ ದೋಷಾರೋಪಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ.

(ಹುಲುಗಪ್ಪ. ಡಿ )
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.